# ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ

## ರೂಪಣಾತ್ಮಕ ಮೌಲ್ಯಮಾಪನ – 1

## 8 ನೆಯ ತರಗತಿ ಪ್ರಥಮ ಭಾಷೆ ಕನ್ನಡ

## ಸಾಧನಾ ಪರೀಕ್ಷೆ – 1

## ಪ್ರಶ್ನೆ ಪತ್ರಿಕೆಯ ನೀಲ ನಕಾಶೆ

# ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ

## ರೂಪಣಾತ್ಮಕ ಮೌಲ್ಯಮಾಪನ – 1

## 8 ನೆಯ ತರಗತಿ ಪ್ರಥಮ ಭಾಷೆ ಕನ್ನಡ

## ಸಾಧನಾ ಪರೀಕ್ಷೆ – 1 – ಪ್ರಶ್ನೆ ಪತ್ರಿಕೆಯ ನೀಲ ನಕಾಶೆ

**ಹಂತ : 1. ಉದ್ದಿಷ್ಟವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ಉದ್ದಿಷ್ಟಗಳು | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ಜ್ಞಾನ / ಸ್ಮರಣೆ | 30.00 | 06 | 06 |
| 2 | ಗ್ರಹಿಕೆ | 30.00 | 06 | 03 |
| 3 | ಅಭಿವ್ಯಕ್ತಿ | 30.00 | 06 | 03 |
| 4 | ಪ್ರಶಂಸೆ | 10.00 | 02 | 01 |
| | **ಒಟ್ಟು** | **100** | **20** | **13** |

**ಹಂತ : 2. ಪ್ರಶ್ನೆಗಳ ಸ್ವರೂಪವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ಪ್ರಶ್ನೆಯ ಸ್ವರೂಪ | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ವಸ್ತುನಿಷ್ಠ | 15 | 03 | 03 |
| 2 | ಕಿರು ಉತ್ತರ – 1 | 15 | 03 | 03 |
| 3 | ಕಿರು ಉತ್ತರ – 2 | 70 | 14 | 07 |
| | **ಒಟ್ಟು** | **100** | **20** | **13** |

**ಹಂತ : 3. ಕ್ಲಿಷ್ಟತೆಯ ಮಟ್ಟವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ಕ್ಲಿಷ್ಟತೆಯ ಮಟ್ಟ | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ಸುಲಭ | 30 | 06 | 06 |
| 2 | ಸಾಧಾರಣ | 50 | 10 | 05 |
| 3 | ಕಠಿಣ | 20 | 04 | 02 |
| | **ಒಟ್ಟು** | **100** | **20** | **13** |

**ಹಂತ : 4(ಎ). ಪಠ್ಯಾಂಶವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ವಿಷಯ | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | **ಗದ್ಯ ಒಟ್ಟು** | **35** | **07** | **04** |
| 2 | **ಪದ್ಯ ಒಟ್ಟು** | **35** | **07** | **04** |
| 3 | **ಪಠ್ಯಪೋಷಕ ಅಧ್ಯಯನ** | **05** | **01** | **01** |
| 4 | **ವ್ಯಾಕರಣಾಂಶಗಳು, ವಾಕ್ಯ ರಚನೆ ಒಟ್ಟು** | **25** | **05** | **04** |
| | **ಸಮಗ್ರ ಒಟ್ಟು** | **100** | **20** | **13** |

**ಹಂತ : 4(ಬಿ) ಪಠ್ಯಾಂಶಗಳನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

## 1. ಗದ್ಯ ಭಾಗ

| ಕ್ರ.ಸಂ. | ಗದ್ಯ ಪಾಠದ ಹೆಸರು | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ಮಗ್ಗದ ಸಾಹೇಬ | 20 | 03 | **02** |
| 2 | ನೀರು ಕೊಡದ ನಾಡಿನಲ್ಲಿ | 15 | 04 | **02** |
| | **ಗದ್ಯ ಒಟ್ಟು** | **35** | **07** | **04** |

## 2. ಪದ್ಯ ಭಾಗ

| ಕ್ರ.ಸಂ | ಪದ್ಯ ಪಾಠದ ಹೆಸರು | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ಕನ್ನಡಿಗರ ತಾಯಿ | 20 | 04 | 02 |
| 2 | ಭಾರತೀಯತೆ | 15 | 03 | 02 |
| | **ಪದ್ಯ ಒಟ್ಟು** | **35** | **07** | **04** |

## 3. ಪಠ್ಯಪೋಷಕ ಅಧ್ಯಯನ

| ಕ್ರ.ಸಂ | ಪಾಠದ ಹೆಸರು | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ಕಟ್ಟುವೆವು ನಾವು | 05 | 01 | 01 |
| | **ಪಠ್ಯ ಪೋಷಕ ಅಧ್ಯಯನ ಒಟ್ಟು** | **05** | **01** | **01** |

## 4. ವ್ಯಾಕರಣ, ಛಂದಸ್ಸು, ಅಲಂಕಾರ, ವಾಕ್ಯ ರಚನೆ

| ಕ್ರ.ಸಂ. | ಪಾಠದ ಹೆಸರು | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ವ್ಯಾಕರಣಾಂಶಗಳು | 15 | 03 | 03 |
| 2 | ವಾಕ್ಯ ರಚನೆ | 10 | 02 | 01 |
| | **ಒಟ್ಟು** | **25** | **05** | **04** |

ಹಂತ : 5. **ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ – ರೂಪಣಾತ್ಮಕ ಮೌಲ್ಯಮಾಪನ – 1**

**8 ನೆಯ ತರಗತಿ ಪ್ರಥಮ ಭಾಷೆ ಕನ್ನಡ**

**ಸಾಧನಾ ಪರೀಕ್ಷೆ – 1 – ಪ್ರಶ್ನೆ ಪತ್ರಿಕೆಯ ನೀಲ ನಕಾಶೆ**

| ಕ್ರ. ಸಂ. | ಪಾಠದ ಹೆಸರು | ಜ್ಞಾನ / ಸ್ಮರಣೆ | | ಗ್ರಹಿಕೆ | | | ಅಭಿವ್ಯಕ್ತಿ | | | ಪ್ರಶಂಸೆ | ಒಟ್ಟು | | | | | | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|---|---|---|---|---|---|---|---|---|---|---|---|---|---|---|
| | | ವ. ನಿ | ಕಿ. ಉ. 1 | ಕಿ. ಉ. 1 | ಕಿ. ಉ. 2 | ದೀ ಉ. 1 | ಕಿ. ಉ. 2 | ದೀ ಉ. 1 | ದೀ ಉ. 2 | ಕಿ. ಉ. 1 | ವ. ನಿ | ಕಿ. ಉ. 1 | ಕಿ. ಉ. 2 | ದೀ. ಉ. 1 | ದೀ ಉ. 2 | | | |
| 1 | ಮಗ್ಗದ ಸಾಹೇಬ | ** | 1(1) | ** | ** | ** | 1(2) | ** | ** | ** | ** | 1(1) | 1(2) | ** | ** | ** | 3 | 2 |
| 2 | ನೀರು ಕೊಡದ ನಾಡಿನಲ್ಲಿ | ** | ** | ** | 1(2) | ** | 1(2) | ** | ** | ** | ** | ** | 2(2) | ** | ** | ** | 4 | 2 |
| | **ಗದ್ಯ ಒಟ್ಟು** | ** | **1(1)** | ** | **1(2)** | ** | **2(2)** | ** | ** | ** | ** | **1(1)** | **3(2)** | ** | ** | ** | **7** | **4** |
| 1 | ಕನ್ನಡಿಗರ ತಾಯಿ | ** | ** | ** | 1(2) | ** | ** | ** | ** | 1(2) | ** | ** | 2(2) | ** | ** | ** | 4 | 2 |
| 2 | ಭಾರತೀಯತೆ | ** | 1(1) | ** | 1(2) | ** | ** | ** | ** | ** | ** | 1(1) | 1(2) | ** | ** | ** | 3 | 2 |
| | **ಪದ್ಯ ಒಟ್ಟು** | ** | **1(1)** | ** | **2(2)** | ** | ** | ** | ** | **1(2)** | ** | **1(1)** | **3(2)** | ** | ** | ** | **7** | **4** |
| 1 | ಕಟ್ಟುವೆವು ನಾವು | ** | 1(1) | ** | ** | ** | ** | ** | ** | ** | ** | 1(1) | ** | ** | ** | ** | 1 | 1 |
| | **ಪಠ್ಯಪೋಷಕ ಅಧ್ಯಯನ** | ** | **1(1)** | ** | ** | ** | ** | ** | ** | ** | ** | **1(1)** | ** | ** | ** | ** | **1** | **1** |
| 1 | ವಾಕ್ಯ ರಚನೆ | ** | ** | ** | ** | ** | 1(2) | ** | ** | ** | ** | ** | 1(2) | ** | ** | ** | 2 | 1 |
| 2 | ವ್ಯಾಕರಣಾಂಶಗಳು | 3(1) | ** | ** | ** | ** | ** | ** | ** | ** | 3(1) | ** | ** | ** | ** | ** | 3 | 3 |
| | **ಒಟ್ಟು** | **3(1)** | ** | ** | ** | ** | ** | ** | ** | ** | **3(1)** | ** | **1(2)** | ** | ** | ** | **5** | **4** |
| | **ಸಮಗ್ರ ಒಟ್ಟು** | **3(1)** | **3(1)** | ** | **3(2)** | ** | **3(2)** | ** | ** | **1(2)** | **3(1)** | **3(1)** | **7(2)** | ** | ** | | **20** | **13** |
| | | **06** | | **06** | | | **06** | | | **2** | **20** | | | | | | | |

**ಸೂಚನೆ :– ಆವರಣದ ಹೊರಗಿನ ಸಂಖ್ಯೆಯು ಪ್ರಶ್ನೆಗಳನ್ನು ಹಾಗೂ ಒಳಗಿರುವ ಸಂಖ್ಯೆಯು ಅಂಕಗಳನ್ನು ಸೂಚಿಸುತ್ತದೆ.**

**ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ – ರೂಪಣಾತ್ಮಕ ಮೌಲ್ಯಮಾಪನ – 1**

**8 ನೆಯ ತರಗತಿ ಪ್ರಥಮ ಭಾಷೆ ಕನ್ನಡ – ಸಾಧನಾ ಪರೀಕ್ಷೆ – 1 – ಪ್ರಶ್ನೆ ಪತ್ರಿಕೆ**

**ಸಮಯ : 1.00 ಗಂಟೆ** **ಗರಿಷ್ಠ ಅಂಕಗಳು : 20**

**ಕೊಟ್ಟಿರುವ ಪ್ರತಿಪ್ರಶ್ನೆಗೂ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಇವುಗಳಲ್ಲಿ ಸರಿಯುತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **3*1=3**

**1.** ಕನ್ನಡ ವರ್ಣಮಾಲೆಯಲ್ಲಿರುವ ವರ್ಗೀಯ ವ್ಯಂಜನಾಕ್ಷರಗಳ ಸಂಖ್ಯೆ;
(ಎ) 25 (ಬಿ) 34
(ಸಿ) 09 (ಡಿ) 49

**2.** ಇವುಗಳಲ್ಲಿ ವಿಜಾತಿ ಸಂಯುಕ್ತಾಕ್ಷರದಿಂದ ಕೂಡಿದ ಪದವಿದು;
(ಎ) ಮುದ್ರಣ (ಬಿ) ಜನ್ನ
(ಸಿ) ನಮ್ಮ (ಡಿ) ತಾಳ್ವೆ

**3.** ಆರು ಸಾಲಿನ ಪದ್ಯವನ್ನು ಹೀಗೆನ್ನುವರು;
(ಎ) ದ್ವಿಪದಿ (ಬಿ) ತ್ರಿಪದಿ
(ಸಿ) ಚೌಪದಿ (ಡಿ) ಷಟ್ಪದಿ

**ಕೊಟ್ಟಿರುವ ಪ್ರತಿಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ.** **3*1=3**

**4.** ಹುಸೇನ್ ಸಾಹೇಬರ ಮನೆತನದವರಿಗೆ ದೇವಾಲಯದಲ್ಲಿದ್ದ ಹಕ್ಕು ಯಾವುದು?
**5.** ಪೆರ್ದೆರೆಗಳು ಯಾವುದಕ್ಕೆ ಮುತ್ತನಿಡುತ್ತಿವೆ?
**6.** ನಮ್ಮೆದೆಯ ಕಾಮಧೇನು ಯಾವುದು?

**ಕೊಟ್ಟಿರುವ ಪ್ರತಿಪ್ರಶ್ನೆಗೂ ಮೂರು / ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.** **2*2=4**

**7.** ವಿದೇಶಗಳಲ್ಲಿ ಬಾಯಾರಿಕೆಗೆ ಧಾರಾಳವಾಗಿ ಏನೇನು ದೊರೆಯುವುವು?
**8.** ಕನ್ನಡದ ಹೆಸರನ್ನು ಹೇಗೆ ಹಬ್ಬಿಸಬೇಕೆಂದು ಕವಿ ಆಶಿಸುತ್ತಾರೆ?

**ಕೊಟ್ಟಿರುವ ಲೇಖಕರ / ಕವಿಗಳ ಕಾಲ, ಸ್ಥಳ ಮತ್ತು ಒಂದು ಕೃತಿಯನ್ನು ಕುರಿತು ವಾಕ್ಯರೂಪದಲ್ಲಿ ಟಿಪ್ಪಣಿ ಬರೆಯಿರಿ.** **1*2=2**

**9.** ನೇಮಿಚಂದ್ರ

**ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ.** **1*2=2**

**10.** * ಕಟ್ಟುವುದು ಕಠಿಣ; ಕೆಡಿಸುವುದು ಸುಲಭ.
* ಚಿಂತೆಯೇ ಮುಪ್ಪು; ಸಂತೋಷವೇ ಯೌವನ.

**ಕೊಟ್ಟಿರುವ ಪ್ರತಿಹೇಳಿಕೆಯನ್ನೂ ಸಂದರ್ಭದೊಡನೆ ವಿವರಿಸಿರಿ.** **1*2=2**

**11.** "ದೇವರು ದೊಡ್ಡವನು ದಯಾಳು"

**ಕೊಟ್ಟಿರುವ ಪದ್ಯಭಾಗವನ್ನು ಪೂರ್ಣಗೊಳಿಸಿರಿ.** **1*2=2**

**12.** ನಾಡಿಗಾಗಿ ತನುವ ತೆತ್ತ ______________________

______________________________

______________________________

______________________ ಧೀರ ಪಯಣದಲ್ಲಿ

**ಕೊಟ್ಟಿರುವ ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.** **1*2=2**

**13.** ಜೈನರಾದ ಪೂಜ್ಯಪಾದ ಕೊಂಡಕುಂದವರ್ಯರ,
ಮಧ್ವಯತಿಯೇ ಬಸವಪತಿಯೇ ಮುಖ್ಯ ಮತಾಚಾರ್ಯರ,
ಶರ್ವ ಪಂಪ ರನ್ನರ,
ಲಕ್ಷ್ಮೀಪತಿ ಜನ್ನರ,
ಷಡಕ್ಷರಿ ಮುದ್ದಣರ,
ಪುರಂದರ ವರೇಣ್ಯರ,
ತಾಯೇ, ನಿನ್ನ ಬಸಿರೆ ಹೊನ್ನಗನಿ ವಿದ್ಯಾರಣ್ಯರ!

## ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ – ರೂಪಣಾತ್ಮಕ ಮೌಲ್ಯಮಾಪನ – 1

## 8 ನೆಯ ತರಗತಿ ಪ್ರಥಮ ಭಾಷೆ ಕನ್ನಡ – ಸಾಧನಾ ಪರೀಕ್ಷೆ – 1 – ಪ್ರಶ್ನೆ ಪತ್ರಿಕೆ

## ಮೌಲ್ಯಮಾಪನ ಸೂಚಿ (ಮಾದರಿ ಉತ್ತರ ಪತ್ರಿಕೆ)

**ಸಮಯ : 1.00 ಗಂಟೆ** **ಗರಿಷ್ಠ ಅಂಕಗಳು : 20**

---

**ಕೊಟ್ಟಿರುವ ಪ್ರತಿಪ್ರಶ್ನೆಗೂ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಇವುಗಳಲ್ಲಿ ಸರಿಯುತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **3*1=3**

**(ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ)**

**1.** ಕನ್ನಡ ವರ್ಣಮಾಲೆಯಲ್ಲಿರುವ ವರ್ಗೀಯಾ ವ್ಯಂಜನಾಕ್ಷರಗಳ ಸಂಖ್ಯೆ;

(ಎ) 25 (ಬಿ) 34
(ಸಿ) 09 (ಡಿ) 49

**ಉತ್ತರ : (ಎ) 25**

**2.** ಇವುಗಳಲ್ಲಿ ವಿಜಾತಿ ಸಂಯುಕ್ತಾಕ್ಷರದಿಂದ ಕೂಡಿದ ಪದವಿದು;

(ಎ) ಮುದ್ದಣ (ಬಿ) ಜನ್ನ
(ಸಿ) ನಮ್ಮ (ಡಿ) ತಾಳ್ವೆ

**ಉತ್ತರ : (ಡಿ) ತಾಳ್ವೆ**

**3.** ಆರು ಸಾಲಿನ ಪದ್ಯವನ್ನು ಹೀಗೆನ್ನುವರು;

(ಎ) ದ್ವಿಪದಿ (ಬಿ) ತ್ರಿಪದಿ
(ಸಿ) ಚೌಪದಿ (ಡಿ) ಷಟ್ಪದಿ

**ಉತ್ತರ : (ಡಿ) ಷಟ್ಪದಿ**

**ಕೊಟ್ಟಿರುವ ಪ್ರತಿಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ.** **3*1=3**

**4. ಹುಸೇನ್ ಸಾಹೇಬರ ಮನೆತನದವರಿಗೆ ದೇವಾಲಯದಲ್ಲಿದ್ದ ಹಕ್ಕು ಯಾವುದು?**
ಬಾಗಲೋಡಿಯ ದೇವಸ್ಥಾನದಲ್ಲಿ ನಡೆಯುವ ರಥೋತ್ಸವದ ಸಮಯದಲ್ಲಿ ಹುಸೇನ್ ಸಾಹೇಬರ ಮನೆತನದವರಿಗೆ ಎಲ್ಲರಿಗಿಂತಲೂ ಮುಂದಾಗಿ ಪ್ರಸಾದವನ್ನು ಪಡೆಯುವ ಹಕ್ಕಿತ್ತು.

**5. ಪೆರ್ದೆರೆಗಳು ಯಾವುದಕ್ಕೆ ಮುತ್ತನಿಡುತ್ತಿವೆ?**
ಪೆರ್ದೆರೆಗಳು ಕರಾವಳಿಗೆ ಮುತ್ತನಿಡುತ್ತಿವೆ.

**6. ನಮ್ಮೆದೆಯ ಕಾಮಧೇನು ಯಾವುದು?**
ನಮ್ಮ ಕನಸುಗಳೇ ನಮ್ಮೆದೆಯ ಕಾಮಧೇನು.

**ಕೊಟ್ಟಿರುವ ಪ್ರತಿಪ್ರಶ್ನೆಗೂ ಮೂರು / ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.** **2*2=4**

**(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ ಎರಡು ಅಂಕಗಳು)**

**7. ವಿದೇಶಗಳಲ್ಲಿ ಬಾಯಾರಿಕೆಗೆ ಧಾರಾಳವಾಗಿ ಏನೇನು ದೊರೆಯುವುವು?**

ಭಾರತವನ್ನು ಹೊರತು ಪಡಿಸಿದರೆ ಉಳಿದೆಲ್ಲ ದೇಶಗಳು 'ನೀರು ಕೊಡದ ನಾಡುಗಳು. ವಿದೇಶಗಳಲ್ಲಿ ಬಾಯಾರಿಕೆಗೆ ಕೋಲಾಗಳು, ಫ್ರೆಂಚ್ ವೈನ್, ಬಿಯರ್, ಬಾಟಲಿಯಲ್ಲಿ ಹಣ್ಣಿ ರಸ ಧಾರಾಳವಾಗಿ ದೊರೆಯುತ್ತದೆ. ಆದರೆ ಕುಡಿಯಲು ಮಾತ್ರ ನೀರು ಸಿಗುವುದಿಲ್ಲ. ವಿದೇಶಗಳಲ್ಲಿ ನೀರನ್ನು ಕುಡಿಯಲು ಪುಕ್ಕಟ್ಟೆಯಾಗಿ ನೀಡುವ ಸಂಪ್ರದಾಯವಿಲ್ಲ. ಹಣಕೊಟ್ಟು ನೀರನ್ನು ಖರೀದಿಸಿ ಕೊಡಬೇಕು.

**8. ಕನ್ನಡದ ಹೆಸರನ್ನು ಹೇಗೆ ಹಬ್ಬಿಸಬೇಕೆಂದು ಕವಿ ಆಶಿಸುತ್ತಾರೆ?**

ಸಂಕೋಚ ಸ್ವಭಾವದ ಕಸ್ತೂರಿಮೃಗ ತನ್ನ ಅಂತರಂಗದ ಕಂಪನ್ನು ಅರಿಯದೆ ಹೊರಗೆ ಹುಡುಕುವಂತೆ ಕನ್ನಡಿಗರು ತಮ್ಮ ನುಡಿಯ ಸೊಗಸನ್ನು ಅರಿಯದೆ ಅನ್ಯ ಭಾಷೆಗೆ ಮನಸೋಲುತ್ತಿರುವರು. ಸಂಕೋಚವನ್ನು ಬಿಟ್ಟು, ಕನ್ನಡದ ಕಸ್ತೂರಿ ಕಂಪನ್ನು ಹೊಸ ಹೊಸ ಸಂಶೋಧನೆಗಳಿಂದ ಶ್ರೀಮಂತಗೊಳಿಸಬೇಕು. ಕನ್ನಡ ನುಡಿಗೆ ನವಶಕ್ತಿಯನ್ನು ತುಂಬಿ, ಸಂತೋಷದ ಸುಧೆಯನ್ನು ಹರಡುವುದರ ಮೂಲಕ ಕನ್ನಡದ ಹೆಸರನ್ನು ಜಗದಲ್ಲಿ ಹಬ್ಬಿಸಬೇಕೆಂದು ಕವಿಗಳು ಆಶಿಸುತ್ತಾರೆ.

**ಕೊಟ್ಟಿರುವ ಲೇಖಕರ / ಕವಿಗಳ ಕಾಲ, ಸ್ಥಳ ಮತ್ತು ಒಂದು ಕೃತಿಯನ್ನು ಕುರಿತು ವಾಕ್ಯರೂಪದಲ್ಲಿ ಟಿಪ್ಪಣಿ ಬರೆಯಿರಿ. 1*2=2**

| | |
|---|---|
| **ಸ್ಥಳ, ಕಾಲ** | **1 ಅಂಕ** |
| **ಕೃತಿ, ಪ್ರಶಸ್ತಿ** | **1 ಅಂಕ** |
| **ಒಟ್ಟು** | **2 ಅಂಕಗಳು** |

**9. ನೇಮಿಚಂದ್ರ**

**ಶ್ರೀಮತಿ ನೇಮಿಚಂದ್ರ** ಅವರು ಕ್ರಿ. ಶ. **1959** ರಲ್ಲಿ **ಚಿತ್ರದುರ್ಗದಲ್ಲಿ** ಜನಿಸಿದರು. ಇವರು **'ಬದುಕು ಬದಲಿಸಬಹುದು'**, 'ಪೆರುವಿನ ಕಣಿವೆಯಲ್ಲಿ', 'ಒಂದು ಕನಸಿನ ಪಯಣ', 'ನಮ್ಮ ಕನಸುಗಳಲ್ಲಿ ನೀವಿದ್ದೀರಿ', 'ಯಾದ್ ವಶೇಮ್' ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಶ್ರೀಯುತರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ನೃಪತುಂಗ ಪ್ರಶಸ್ತಿ, ಅತ್ತಿಮಬ್ಬೆ ಪ್ರಶಸ್ತಿ ಮೊದಲಾದ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ.

**ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ.** **1*2=2**

**10. * ಕಟ್ಟುವುದು ಕಠಿಣ; ಕೆಡಿಸುವುದು ಸುಲಭ.**

*** ಚಿಂತೆಯೇ ಮುಪ್ಪು; ಸಂತೋಷವೇ ಯೌವನ.**

| | |
|---|---|
| **ಗಾದೆಯ ಮಹತ್ವದ ವಿವರಣೆ** | **1 ಅಂಕ** |
| **ಉದಾಹರಣೆಯೊಂದಿಗೆ ಅರ್ಥ ವಿವರಣೆ** | **1 ಅಂಕ** |
| **ಒಟ್ಟು** | **2 ಅಂಕಗಳು** |

**ಕೊಟ್ಟಿರುವ ಪ್ರತಿಹೇಳಿಕೆಯನ್ನೂ ಸಂದರ್ಭದೊಡನೆ ವಿವರಿಸಿರಿ.** **1*2=2**

| | |
|---|---|
| **ಆಯ್ಕೆ : ಕರ್ತೃ – ಆಕರ – ಪಠ್ಯ** | **1 ಅಂಕ** |
| **ಸಂದರ್ಭ : ಯಾರು – ಯಾರಿಗೆ – ಯಾವಾಗ** | **1 ಅಂಕ** |
| **ಒಟ್ಟು** | **2 ಅಂಕಗಳು** |

**11. "ದೇವರು ದೊಡ್ಡವನು ದಯಾಳು"**

**ಆಯ್ಕೆ :–** ಪ್ರಸ್ತುತ ವಾಕ್ಯವನ್ನು ಶ್ರೀ **ಬಾಗಲೋಡಿ ದೇವರಾಯ** ಅವರು ಬರೆದಿರುವ **'ಸಮಗ್ರ ಕತೆಗಳು'** ಎಂಬ ಕೃತಿಯಿಂದ ಆಯ್ದ **'ಮಗ್ಗದ ಸಾಹೇಬ'** ಎಂಬ ಸಣ್ಣ ಕತೆಯಿಂದ ಆರಿಸಲಾಗಿದೆ.

**ಸಂದರ್ಭ:–** ಕರೀಮನಿಗೆ ಭಾರತದ ರಾಷ್ಟ್ರಪತಿ ಅವರು ಪದ್ಮಭೂಷಣ ಬಿರುದನ್ನು ಕೊಡುತ್ತಿರುವ ಭಾವಚಿತ್ರವು ಪ್ರಕಟವಾಗಿದ್ದ ವಾರ್ತಾಪತ್ರಿಕೆಯನ್ನು ನಿವೃತ್ತ ಮಾಸ್ತರ ಶಂಕರಪ್ಪನವರು ರಹೀಮನಿಗೆ ತೋರಿಸಿ ಅದರ ಬಗ್ಗೆ ವಿವರಿಸಿದ ಸಂದರ್ಭದಲ್ಲಿ ರಹೀಮನು ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ:–** ತಾನು ತಿರಸ್ಕರಿಸಿದ ಮಗನ ಸಾಧನೆಯನ್ನು ಕಂಡ ರಹೀಮನ ಭಾವುಕತನ ಇಲ್ಲಿ ವ್ಯಕ್ತವಾಗಿದೆ.

**ಕೊಟ್ಟಿರುವ ಪದ್ಯಭಾಗವನ್ನು ಪೂರ್ಣಗೊಳಿಸಿರಿ.** **1*2=2**

**(ತಪ್ಪಿಲ್ಲದೆ ಬರೆದ ಪ್ರತಿ ಪೂರ್ಣ ಸಾಲಿಗೆ 1/2 ಅಂಕ)**

**12.**
ನಾಡಿಗಾಗಿ ತನುವ ತೆತ್ತ ಹುತಾತ್ಮರ ಸ್ಮರಣೆಯಲ್ಲಿ
ನಮ್ಮ ಕಷ್ಟದಲ್ಲು ನೆರೆಗೆ ನೆರಳನೀವ ಕರುಣೆಯಲ್ಲಿ
ದಾರಿ ಬಳಸಿ ಏರುವಲ್ಲಿ ಬಿರುಗಾಳಿಯೆ ಮೊಗಳಗುವಲ್ಲಿ
ನಮ್ಮ ಗುರಿಯ ಬೆಳಕಿನೆಡೆಗೆ ನಡೆವ ಧೀರ ಪಯಣದಲ್ಲಿ

**ಕೊಟ್ಟಿರುವ ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.** **1*2=2**

| | |
|---|---|
| **ಮೌಲ್ಯವನ್ನು ಗುರುತಿಸುವುದು** | **1. ಅಂಕ** |
| **ಸಾರಾಂಶ ಬರೆಯುವುದಕ್ಕೆ, ಭಾಷಾ ಶೈಲಿ** | **1. ಅಂಕಗಳು** |
| **ಒಟ್ಟು** | **2. ಅಂಕಗಳು** |

**13.**
**ಜೈನರಾದ ಪೂಜ್ಯಪಾದ ಕೊಂಡಕುಂದವರ್ಯರ,**
**ಮಧ್ವಯತಿಯೇ ಬಸವಪತಿಯೇ ಮುಖ್ಯ ಮತಾಚಾರ್ಯರ,**
**ಶರ್ವ ಪಂಪ ರನ್ನರ,**
**ಲಕ್ಷ್ಮೀಪತಿ ಜನ್ನರ,**
**ಷಡಕ್ಷರಿ ಮುದ್ದಣರ,**
**ಪುರಂದರ ವರೇಣ್ಯರ,**
**ತಾಯೇ, ನಿನ್ನ ಬಸಿರೆ ಹೊನ್ನಗನಿ ವಿದ್ಯಾರಣ್ಯರ!**

ಕನ್ನಡ ನಾಡಿನ ಜೈನ ಮತಾಚಾರ್ಯರಾದ ಕೊಂಡಕುಂದವರ್ಯರು, ದ್ವೈತ ಸಿದ್ಧಾಂತ ಪ್ರತಿಪಾದಿಸಿದ ಮಧ್ವಾಚಾರ್ಯರು, ಸಾಮಾಜಿಕ ಕ್ರಾಂತಿಯ ಹರಿಕಾರ ಬಸವಣ್ಣನವರು ಸಮಾಜ ಸುಧಾರಣೆಯನ್ನು ಮಾಡಿದ್ದಾರೆ. ಕನ್ನಡನಾಡಿನ ಆದಿ ಮಹಾಕವಿ ಪಂಪ, ಕವಿ ಚಕ್ರವರ್ತಿ ರನ್ನ, ಕವಿ ಚೂತವನ ಚೈತ್ರನಾದ ಲಕ್ಷ್ಮೀಶ, ಕವಿರತ್ನ ಜನ್ನ, ಷಡಕ್ಷರಿ, ಮುದ್ದಣ ಮೊದಲಾದವರು ಮಹಾಕಾವ್ಯಗಳನ್ನು ರಚಿಸಿದ್ದಾರೆ. ದಾಸ ಶ್ರೇಷ್ಠರಾದ ಪುರಂದರದಾಸರು, ವಿದ್ಯಾರಣ್ಯ ಮಹರ್ಷಿಗಳು ಮೊದಲಾದವರು ಭಕ್ತಿ ಪ್ರಧಾನವಾದ ಕೀರ್ತನೆಗಳನ್ನು ರಚಿಸಿದ್ದಾರೆ. ಹೀಗೆ ಕನ್ನಡದ ಈ ಶ್ರೇಷ್ಠ ಕವಿಗಳು ಕನ್ನಡ ತಾಯಿಯ ಬಸಿರ ಹೊನ್ನಗನಿಯಾಗಿದ್ದಾರೆ.

ಹಂತ : 8. ಪ್ರಶ್ನಾನುಸಾರ ವಿಶ್ಲೇಷಣೆ.

| ಪ್ರಶ್ನೆ ಸಂಖ್ಯೆ | ಘಟಕದ ಹೆಸರು | ಉದ್ದಿಷ್ಟ | ನಿರ್ದಿಷ್ಟ | ಪ್ರಶ್ನೆರೂಪ | ಅಂಕ | ಕಠಿಣತೆಯ ಮಟ್ಟ | ಬೇಕಾಗುವ ಸಮಯ |
|---|---|---|---|---|---|---|---|
| 1 | ವ್ಯಾಕರಣಾಂಶಗಳು | ಜ್ಞಾನ / ಸ್ಮರಣೆ | ಸ್ಮರಿಸಿ ಉತ್ತರಿಸುತ್ತಾನೆ/ಳೆ | ವಸ್ತುನಿಷ್ಠ | 1 | ಸುಲಭ | 2 ನಿಮಿಷಗಳು |
| 2 | ವ್ಯಾಕರಣಾಂಶಗಳು | ಜ್ಞಾನ / ಸ್ಮರಣೆ | ಸ್ಮರಿಸಿ ಉತ್ತರಿಸುತ್ತಾನೆ/ಳೆ | ವಸ್ತುನಿಷ್ಠ | 1 | ಸುಲಭ | 2 ನಿಮಿಷಗಳು |
| 3 | ವ್ಯಾಕರಣಾಂಶಗಳು | ಜ್ಞಾನ / ಸ್ಮರಣೆ | ಸ್ಮರಿಸಿ ಉತ್ತರಿಸುತ್ತಾನೆ/ಳೆ | ವಸ್ತುನಿಷ್ಠ | 1 | ಸುಲಭ | 2 ನಿಮಿಷಗಳು |
| 4 | ಮಗ್ಗದ ಸಾಹೇಬ | ಜ್ಞಾನ / ಸ್ಮರಣೆ | ಸ್ಮರಿಸಿ ಉತ್ತರಿಸುತ್ತಾನೆ/ಳೆ | ಕಿರು ಉತ್ತರ 1 | 1 | ಸುಲಭ | 2 ನಿಮಿಷಗಳು |
| 5 | ಭಾರತೀಯತೆ | ಜ್ಞಾನ / ಸ್ಮರಣೆ | ಸ್ಮರಿಸಿ ಉತ್ತರಿಸುತ್ತಾನೆ/ಳೆ | ಕಿರು ಉತ್ತರ 1 | 1 | ಸುಲಭ | 2 ನಿಮಿಷಗಳು |
| 6 | ಕಟ್ಟುವೆವು ನಾವು | ಜ್ಞಾನ / ಸ್ಮರಣೆ | ಸ್ಮರಿಸಿ ಉತ್ತರಿಸುತ್ತಾನೆ/ಳೆ | ಕಿರು ಉತ್ತರ 1 | 1 | ಸುಲಭ | 2 ನಿಮಿಷಗಳು |
| 7 | ನೀರು ಕೊಡದ ನಾಡಿನಲ್ಲಿ | ಗ್ರಹಿಕೆ | ಬರೆಯುತ್ತಾನೆ/ಳೆ | ಕಿರು ಉತ್ತರ 2 | 2 | ಸಾಧಾರಣ | 4 ನಿಮಿಷಗಳು |
| 8 | ಕನ್ನಡಿಗರ ತಾಯಿ | ಗ್ರಹಿಕೆ | ಬರೆಯುತ್ತಾನೆ/ಳೆ | ಕಿರು ಉತ್ತರ 2 | 2 | ಸಾಧಾರಣ | 4 ನಿಮಿಷಗಳು |
| 9 | ನೀರು ಕೊಡದ ನಾಡಿನಲ್ಲಿ | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | ಕಿರು ಉತ್ತರ 2 | 2 | ಸಾಧಾರಣ | 4 ನಿಮಿಷಗಳು |
| 10 | ವಾಕ್ಯ ರಚನೆ | ಅಭಿವ್ಯಕ್ತಿ | ಬರೆಯುತ್ತಾನೆ/ಳೆ | ಕಿರು ಉತ್ತರ 2 | 2 | ಕಠಿಣ | 9 ನಿಮಿಷಗಳು |
| 11 | ಮಗ್ಗದ ಸಾಹೇಬ | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | ಕಿರು ಉತ್ತರ 2 | 2 | ಸಾಧಾರಣ | 4 ನಿಮಿಷಗಳು |
| 12 | ಭಾರತೀಯತೆ | ಗ್ರಹಿಕೆ | ಬರೆಯುತ್ತಾನೆ/ಳೆ | ಕಿರು ಉತ್ತರ 2 | 2 | ಸಾಧಾರಣ | 4 ನಿಮಿಷಗಳು |
| 13 | ಕನ್ನಡಿಗರ ತಾಯಿ | ಪ್ರಶಂಸೆ | ವಿವರಿಸುತ್ತಾನೆ/ಳೆ | ಕಿರು ಉತ್ತರ 2 | 2 | ಕಠಿಣ | 9 ನಿಮಿಷಗಳು |
| | ಒಟ್ಟು | | | | 20 | | 50 + 10 ನಿಮಿಷಗಳು |